MANUVIKASA

Success Stories

# ಮೂರು ಕೆರೆ ಅಭಿವೃದ್ಧಿ; ಹತ್ತಾರು ಉಪಯೋಗ

*ಸಾರಾಂಶ: ಮನಗುಂದ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕಾಡನಕಟ್ಟೆ, ಜಾಲಿಕೆರೆ ಹಾಗೂ ಹಾಲಹೊಂಡ ಕೆರೆ ಅಭಿವೃದ್ಧಿಯು ಹತ್ತಾರು ಪ್ರತ್ಯಕ್ಷ ಮತ್ತು ಪರೋಕ್ಷ ಅನುಕೂಲಗಳಿಗೆ ನಾಂದಿ ಹಾಡಿದೆ. ರೈತರು ಬಹುದೂರದ ನದಿಯಿಂದ ನೀರು ಹರಿಸುವುದು ಕಡಿಮೆಯಾಗಿದೆ, ಬೆಳೆಗಳ ಇಳುವರಿ ಹೆಚ್ಚಿದೆ, ಕೆರೆ ಪರಿಸರ ಸ್ವಚ್ಛಗೊಂಡಿದೆ, ಅಂತರ್ಜಲ ಮಟ್ಟ ಸುಧಾರಣೆಯಾಗಿದೆ . .*

"2018–19ರಲ್ಲಿ ನಮ್ಮ ಪಂಚಾಯ್ತಿ ವಾಟರ್ ಸಪ್ಲೈ ಕೊಳವೆ ಬಾವಿ ಬಂದ್ ಆಗಿತ್ತು, ಹೊಳಿ ಬದಿ ಮತ್ತೊಂದ್ ತೆಗೆಸಿ ನೀರು ತರ್‍ತಾ ಇದ್ವಿ, ಈ ಕೆರೆ ಹೂಳು ತೆಗೆದ ಮೇಲೆ ಕೊಳವೆ ಬಾವಿಲಿ ಮತ್ತೆ ನೀರು ಬಂದೈತಿ, ಇದೊಂದೇ ಅಲ್ರೀ ನಮ್ಮೂರಾಗ 60–70 ಕೊಳವೆ ಬಾವಿಗಳು ಮತ್ತೆ ನೀರು ಕೊಡಾಕತ್ತಾವು" ಎಂದು ಹೇಳುತ್ತಿದ್ದ ಮನಗುಂದ ಗ್ರಾಮ ಪಂಚಾಯ್ತಿ ಸದಸ್ಯ ಚಿದಾನಂದ ಸ್ವಾಮಿಯವರ ಮಾತಿಗೆ ಅಲ್ಲಿ ನೆರೆದಿದ್ದ ಹತ್ತಾರು ಜನ ತಲೆದೂಗಿ ತಮ್ಮ ಅನುಮೋದನೆ ನೀಡುತ್ತಿದ್ದರು. ಜೊತೆಗೆ ಕೆರೆ ಹೂಳು ತೆಗೆದ ಪರಿಣಾಮವಾಗಿ ಏನೆಲ್ಲಾ ಉಪಯೋಗವಾಯಿತು ಎಂದು ಒಬ್ಬೊಬ್ಬರೇ ತಮ್ಮ ಅನುಭವಗಳನ್ನು ಹೇಳುತ್ತಾ ಹೋದರು.



ಗುತ್ಯಪ್ಪ ಅವರ ಅನುಭವ ಹೀಗಿದೆ. ಇವರು ಮೆಕ್ಕೆ ಜೋಳ ಬೆಳೆಯುತ್ತಿದ್ದು ವರ್ಷಕ್ಕೆ 3–4 ಚೀಲ ರಸಗೊಬ್ಬರ ಹಾಕುವುದು ಹಲವು ವರ್ಷಗಳಿಂದ ನಡೆದುಬಂದ ಪದ್ಧತಿ. ಪ್ರತಿ ವರ್ಶ ರಸಗೊಬ್ಬರ ಬಳಕೆ ಪ್ರಮಾಣ ಹೆಚ್ಚಿಸುತ್ತಲೇ ಇದ್ದರು. ಆದರೆ ಹೂಳು ಹಾಕಿದ ವರ್ಷ ಮೆಕ್ಕೆ ಜೋಳ ಎಷ್ಟು ಚೆನ್ನಾಗಿ ಬೆಳೆಯಿತೆಂದರೆ ಇವರಿಗೆ ರಸಗೊಬ್ಬರ ಅಥವಾ ಕೊಟ್ಟಿಗೆ ಗೊಬ್ಬರ ಹಾಕುವ ಪ್ರಮೇಯವೇ ಬರಲಿಲ್ಲ. ಜೋಳದ ದಂಟುಗಳು ಅಷ್ಟು ದಪ್ಪ ಹಾಗೂ ಸದೃಡವಾಗಿದ್ದವು, ಗರಿಗಳು ಅಗಲ ಹಾಗೂ ಕಡು ಹಸಿರಿನಿಂದ ಕೂಡಿದ್ದವು. ಇಳುವರಿಯೂ ಪ್ರತಿಸಲಕ್ಕಿಂತ 4 ಕ್ವಿಂಟಾಲ್ ಹೆಚ್ಚಾಗಿಯೇ ಬಂದಿತು.

ಊರಿನ ಮಗ್ಗುಲಲ್ಲೇ ಇದ್ದ ಕೆರೆಯಲ್ಲಿ ಜನರು ತಿಪ್ಪೆಗಳನ್ನು ಹಾಕುತ್ತಿದ್ದರು. ಅದು ಅಲ್ಲೇ ಕೊಳೆತು ಇಡೀ ಊರಿಗೇ ಕೆಟ್ಟ ವಾಸನೆ ಬರುತ್ತಿತ್ತು ಹಾಗೂ ಆ ವಾತಾವರಣದಿಂದಾಗಿ ಸೊಳ್ಳೆಗಳ ಹಾವಳಿ ವಿಪರೀತವಾಗಿತ್ತು. ಕೆರೆಯಲ್ಲಿ ಹೂಳು ತೆಗೆದು ತಿಪ್ಪೆಗಳನ್ನು ಬೇರೆಡೆಗೆ ಸ್ಥಳಾಂತರಿಸಿ, ಕಸ–ಕಡ್ಡಿ ಸ್ವಚ್ಛಗೊಳಿಸಿದಾಗ ಸೊಳ್ಳೆ ಹಾಗೂ ವಾಸನೆ ಸಮಸ್ಯೆ ಕೊನೆಗೊಂಡಿತು.



ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಮನಗುಂದ ಗ್ರಾಮದಲ್ಲಿ ಮನು ವಿಕಾಸ ಸಂಸ್ಥೆಯು ಮೂರು ಕೆರೆಗಳನ್ನು ಅಭಿವೃದ್ಧಿಪಡಿಸಿದೆ. ಕಾಡನಕಟ್ಟೆ, ಜಾಲಿಕೆರೆ ಹಾಗೂ ಹಾಲಹೊಂಡ ಕೆರೆಗಳೇ ಅಭಿವೃದ್ಧಿ ಆಗಿರುವಂಥಹವು. 2020–21 ಹಾಗೂ 21–22ನೇ ಇಸವಿಯಲ್ಲಿ ಈ ಕಾಮಗಾರಿಗಳು ನಡೆದಿವೆ. ಜಾಲಿಕೆರೆ ಗ್ರಾಮಕ್ಕೆ ಸ್ವಲ್ಪ ದೂರದಲ್ಲಿದ್ದರೆ, ಕಾಡನಕಟ್ಟೆ ಹಾಗೂ ಹಾಲಹೊಂಡ ಕೆರೆಗಳು ಊರಿನ ಪಕ್ಕದಲ್ಲಿಯೇ ಬರುತ್ತವೆ. ಗ್ರಾಮಸ್ಥರೂ ಸಹ ಈ ಕೆಲಸಕ್ಕೆ ಸಂಪೂರ್ಣ ಸಹಕಾರ ನೀಡಿರುವುದು ವಿಶೇಷ.

ಕಾಡನಕಟ್ಟೆ ಕೆರೆಯ ನೀರು ನಿಲ್ಲುವ ಸ್ಥಳದ ವಿಸ್ತೀರ್ಣವು 8 ಎಕರೆ ಇದ್ದರೆ, ಜಾಲಿಕೆರೆಯು ಸಣ್ಣನೀರಾವರಿ ಇಲಾಖೆ ವ್ಯಾಪ್ತಿಯ ದೊಡ್ಡ ಕೆರೆಯಾಗಿದ್ದು 17 ಎಕರೆ ವಿಸ್ತೀರ್ಣವನ್ನು ಹೊಂದಿದೆ. ಹಾಲಹೊಂಡ ಸಣ್ಣ ಕೆರೆ. ಜಾಲಿಕೆರೆಯಲ್ಲಿ ಸರಿಯಾಗಿ ನೀರು ನಿಲ್ಲುತ್ತಿರಲಿಲ್ಲ. ಸೋರಿಕೆಯಾಗಿ ಹೋಗುತ್ತಿತ್ತು. ಕೆರೆಯ ಮಧ್ಯದಲ್ಲಿ ಹೂಳು ತೆಗೆದ ಪರಿಣಾಮ ಈಗ ನೀರು ಹೆಚ್ಚು ಕಾಲ ನಿಲ್ಲುತ್ತಿದೆ. ಭೂಮಿಯಲ್ಲಿ ನೀರು ಹಿಂಗಿ ಸುತ್ತ–ಮುತ್ತಲ ಪ್ರದೇಶದಲ್ಲಿ ಅಂತರ್ಜಲ ಹೆಚ್ಚುತ್ತಿದೆ. ಮುಖ್ಯವಾಗಿ ದನ–ಕರುಗಳಿಗೆ ಕುಡಿಯಲು ನೀರು ಲಭ್ಯವಾಗುತ್ತಿದೆ. ಪ್ರತಿಯೊಂದು ಕೆರೆಯಲ್ಲಿ ಹೂಳು ತೆಗೆಯಲು ಸುಮಾರು 15 ದಿವಸಗಳ ಅವಧಿ ತೆಗೆದುಕೊಂಡಿದೆ. ಪ್ರತಿ ದಿನ 80 ಟ್ರ್ಯಾಕ್ಟರ್ ಗಳ ಮೂಲಕ ರೈತರು ತಮ್ಮ–ತಮ್ಮ ಹೊಲಗಳಿಗೆ ಕೆರೆ ಹೂಳನ್ನು ರವಾನಿಸಿಕೊಂಡಿದ್ದಾರೆ. ಹತ್ತಿರದ ಇತರೆ ಊರಿನವರೂ ಸಹ ಹೂಳು ತೆಗೆದುಕೊಂಡು ಹೋಗಿರುವುದು ವಿಶೇಷ.

ಈ ಕೆಲಸ ಆಗುವ ಮೊದಲು ಮನು ವಿಕಾಸ ಸಿಬ್ಬಂದಿಗಳು ಗ್ರಾಮದಲ್ಲಿ ಸಭೆ ಮಾಡಿ, ಗ್ರಾಮ ಪಂಚಾಯ್ತಿಯನ್ನು ಸಂಪರ್ಕಿಸಿ, ಅದಾದ ಬಳಿಕ ಈಗಾಗಲೇ ಸಂಸ್ಥೆ ಮೂಲಕ ಕೆರೆ ಅಭಿವೃದ್ಧಿ ಆಗಿರುವ ಕೆರೆ ಗ್ರಾಮಗಳಿಗೆ ಆಸಕ್ತರನ್ನು ಪ್ರವಾಸ ಕರೆದೊಯ್ದು ಮನವರಿಕೆ ಮಾಡಲಾಗಿತ್ತು. ಸ್ಥಳೀಯ ಶಾಸಕರು ಬಂದು ಹೂಳು ತೆಗೆಯುವ ಚಟುವಟಿಕೆಯನ್ನು ಉದ್ಘಾಟಿಸಿದ್ದರು. ಈಗ (2022) ಎಲ್ಲಾ ಕೆರೆಗಳಲ್ಲಿ ಹೂಳು ತೆಗೆಯುವ ಕಾರ್ಯ ಮುಗಿದಿದ್ದು ಅವುಗಳಲ್ಲಿ ಸಮೃದ್ಧ ನೀರೂ ಸಹ ತುಂಬಿದೆ. ಹಾಗಾಗಿ ಕೆರೆಗಳಿಗೆ ಬಾಗಿನ ಅರ್ಪಿಸುವ ಕಾರ್ಯಕ್ಕೆ ಗ್ರಾಮಸ್ಥರು ಸಿದ್ಧತೆ ನಡೆಸಿದ್ದಾರೆ. ಇದಕ್ಕಾಗಿ ಶಾಸಕರು ಹಾಗೂ ಸಂಬಂಧಪಟ್ಟ ಸಚಿವರನ್ನು ಆಹ್ವಾನಿಸುವ ಚರ್ಚೆಗಳು ನಡೆದಿವೆ.

ಕೆರೆಗಳಲ್ಲಿ ಹೂಳು ತುಂಬಿ ನೀರು ನಿಲ್ಲುವ ಸಾಮರ್ಥ್ಯ ಕುಂಠಿತವಾಗಿದ್ದಾಗ ರೈತರು ತಮ್ಮ ತೋಟ, ಗದ್ದೆಗಳಿಗೆ ನೀರು ತರಲು ಪರದಾಡುತ್ತಿದ್ದರು. 2 ಕಿಲೋಮೀಟರ್ ದೂರದಲ್ಲಿರುವ ವರದಾ ನದಿಯಿಂದ ಪೈಪ್ ಲೈನ್ ಮೂಲಕ ನೀರು ತರುತ್ತಿದ್ದುದು

ವಾಡಿಕೆ. ಇದಕ್ಕಾಗಿ ವಿಪರೀತ ಹಣ ಖರ್ಚಾಗುತ್ತಿತ್ತು. "ಪ್ರತಿಯೊಬ್ಬ ರೈತರಿಗೆ ವರ್ಷಕ್ಕೆ ಈ ರೀತಿ ನೀರು ತರಲು 25–30 ಸಾವಿರ ಖರ್ಚು ಬರುತ್ತಿತ್ತು" ಎನ್ನುತ್ತಾರೆ ಗ್ರಾಮದ ರೈತರಾದ ಗುತ್ಯಪ್ಪ ಫಕೀರಪ್ಪ ತಳವಾರ. ಇದರಲ್ಲಿ ಪಂಪ್ ಸೆಟ್, ಪೈಪುಗಳು ಹಾಗೂ ಡೀಸಲ್ ವೆಚ್ಚ ಸೇರಿದೆ. 50ರಿಂದ 60 ರೈತರು ಹೀಗೆ ನದಿಯಿಂದ ನೀರು ತರುತ್ತಿದ್ದು 12–13 ಲಕ್ಷ ಖರ್ಚು ಮಾಡುತ್ತಿದ್ದರು. ಈಗ ಕಳೆದ 3 ವರ್ಷಗಳಿಂದ ಕೆರೆಯಲ್ಲೇ ಸಮೃದ್ಧ ನೀರು ಲಭ್ಯವಿದ್ದು ನದಿಯಿಂದ ನೀರು ತರುವ ವೆಚ್ಚ ತಪ್ಪಿದೆ. ಇದೊಂದು ದೊಡ್ಡ ಉಳಿತಾಯ.

ಸಾಮಾನ್ಯವಾಗಿ ವರ್ಷದ ಜುಲೈನಿಂದ ಜನವರಿಯವರೆಗೆ ಕೆರೆಯ ತೂಬು ತೆಗೆದು ಅಚ್ಚುಕಟ್ಟಿಗೆ ನೀರು ಬಳಸುತ್ತಾರೆ. ನಂತರ ಬೇಸಿಗೆ ಆರಂಭವಾಗುವುದರಿಂದ ಕೆರೆಯಲ್ಲಿ ನೀರು ಉಳಿಯಲಿ ಎಂದು ತೂಬು ನಿಲ್ಲಿಸುತ್ತಾರೆ. ಜಾನುವಾರುಗಳಿಗೆ ಕುಡಿಯಲು ಹಾಗೂ ಕೊಳವೆಬಾವಿಗಳಲ್ಲಿ ನೀರಿನ ಮಟ್ಟ ಉಳಿಯಲಿ ಎಂಬ ಕಾರಣಕ್ಕಾಗಿ ಈ ಕ್ರಮ ಅನುಸರಿಸುವ ತೀರ್ಮಾನವನ್ನು ಗ್ರಾಮಸ್ಥರು ತೆಗೆದುಕೊಂಡಿದ್ದಾರೆ.




ಗ್ರಾಮದ ಮೂರೂ ಕೆರೆಗಳಲ್ಲಿ ತುಂಬಾ ವರ್ಷಗಳಿಂದ ಹೂಳು ತುಂಬಿಕೊಂಡಿದ್ದು ಅತ್ಯಂತ ಫಲವತ್ತಾಗಿತ್ತು. ಈ ಮಣ್ಣಿನ ಬಳಕೆಯಿಂದ ಇಳುವರಿಯಲ್ಲಿ ಗಮನಾರ್ಹ ಹೆಚ್ಚಳವಾಗಿರುವುದನ್ನು ಗ್ರಾಮಸ್ಥರು ಗುರುತಿಸಿದ್ದಾರೆ. ಉದಾಹರಣೆಗೆ ಈ ಭಾಗದಲ್ಲಿ ಭತ್ತದ ಇಳುವರಿ ಸಾಮಾನ್ಯವಾಗಿ ಎಕರೆಗೆ 25ರಿಂದ 30 ಚೀಲ. ಆದರೆ ಹೂಳು ಹಾಕಿದ ನಂತರ ಇಳುವರಿಯ ಪ್ರಮಾಣ 40ರಿಂದ 45 ಚೀಲಗಳಿಗೆ ಏರಿಕೆಯಾಗಿದೆ. ಕ್ವಿಂಟಾಲ್ ಲೆಕ್ಕದಲ್ಲಿ ಹೇಳಬೇಕೆಂದರೆ 17ರಿಂದ 21 ಕ್ವಿಂಟಾಲ್ ನಿಂದ 28–31 ಕ್ವಿಂಟಾಲ್ ವರೆಗೆ ಇಳುವರಿ ಪ್ರಮಾಣ ಹೆಚ್ಚಿದೆ. ಅಂದರೆ ಸರಾಸರಿ 10 ಕ್ವಿಂಟಾಲ್ ಹೆಚ್ಚಳ. ಕ್ವಿಂಟಾಲ್ ಒಂದಕ್ಕೆ ರೂ. 1000ದಂತೆ ಬೆಲೆ ಹಿಡಿದರೂ ಸಹ ರೂ. 10000 ಹೆಚ್ಚುವರಿ ಮೊತ್ತ ರೈತರಿಗೆ ದೊರೆತಂತಾಯಿತು. ಲಭ್ಯವಿರುವ ನೀರನ್ನು ಬಳಸಿಕೊಂಡು ಅಚ್ಚುಕಟ್ಟಿನ ಕೆಲವು ರೈತರು ವರ್ಷದಲ್ಲಿ ಎರಡು ಬೆಳೆ ತೆಗೆಯುತ್ತಿದ್ದಾರೆ. ಅಲ್ಲದೆ ಕೆರೆಯಲ್ಲಿ ಸಮೃದ್ಧ ನೀರು ಲಭ್ಯವಾದ ಬಳಿಕ 3–4 ಜನ ರೈತರು ಸುಮಾರು 20–30 ಎಕರೆ ಪ್ರದೇಶದಲ್ಲಿ ಹೊಸದಾಗಿ ಅಡಿಕೆ ತೋಟ ಅಭಿವೃದ್ಧಿಪಡಿಸುತ್ತಿದ್ದಾರೆ. ಇದೆಲ್ಲವೂ ಸಹ ಹೂಳು ತೆಗೆದು ನೀರು ನಿಲ್ಲುವ ಸಾಮರ್ಥ್ಯ ಹೆಚ್ಚಾದ ಪರಿಣಾಮ.

**ಒಟ್ಟಾರೆ ಈ ಕೆರೆಗಳ ಹೂಳು ತೆಗೆದಿದ್ದರಿಂದ ಆಗಿರುವ ಪರಿಣಾಮಗಳನ್ನು ನೋಡುವುದಾದರೆ;**

- ಬೆಳೆಗಳ ಇಳುವರಿಯಲ್ಲಿ ಹೆಚ್ಚಳವಾಗಿದೆ.
- ರಸಗೊಬ್ಬರ ಖರೀದಿಯ ಪ್ರಮಾಣ ಕಡಿಮೆಯಾಗಿದೆ.
- ನದಿಯಿಂದ ನೀರು ತರುವುದು ನಿಂತಿದ್ದರಿಂದ ಹೆಚ್ಚುವರಿ ಕೃಷಿ ವೆಚ್ಚ ಕಡಿಮೆಯಾಗಿದೆ.
- ರೈತರಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಹೆಚ್ಚುವರಿ ಕೆಲಸ ಲಭ್ಯವಾಗಿದೆ.
- ಅಂತರ್ಜಲ ಮಟ್ಟ ಹೆಚ್ಚಿದೆ.
- ಆದಾಯ ಪ್ರಮಾಣ ಹೆಚ್ಚಿದೆ.
- ಕೆರೆ ಮಣ್ಣು ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಗೂ ರಚನೆಯಲ್ಲಿ ಸುಧಾರಣೆಯಾಗಿದೆ.
- ಕೆರೆಗಳ ಪರಿಸರ ಉತ್ತಮಗೊಂಡಿದೆ.
- ಸಮುದಾಯದಲ್ಲಿ ಒಗ್ಗಟ್ಟು ಮೂಡಿದೆ . . . ಹೀಗೆ ಪಟ್ಟಿ ಮಾಡಬಹುದು.

ಗ್ರಾಮದಲ್ಲಿ ಕೆರೆ ಹೂಳು ತೆಗೆಯುವ ವರ್ಷ ಕೊರೊನಾ ರೋಗದ ಭಯ ವ್ಯಾಪಿಸಿತ್ತು. ತಿಂಗಳುಗಟ್ಟಲೆ ಕೆಲಸವಿಲ್ಲದೆ, ವರಮಾನವಿಲ್ಲದೆ ಹಲವು ಕುಟುಂಬಗಳು ಪರದಾಡುತ್ತಿದ್ದವು. ಈ ಸಮಯದಲ್ಲಿ ಮನು ವಿಕಾಸ ವತಿಯಿಂದ ಹೆಚ್ಚು ತೊಂದರೆಗೊಳಗಾಗಿದ್ದ 65 ಕುಟುಂಬಗಳಿಗೆ ಆಹಾರ ಹಾಗೂ ವೈದ್ಯಕೀಯ ಕಿಟ್ ವಿತರಿಸಲಾಗಿದೆ.

**ಸಂಪರ್ಕ**

ಚಿದಾನಂದ ಸ್ವಾಮಿ ಹಿರೇಮಠ್
ಗ್ರಾಮ ಪಂಚಾಯ್ತಿ ಸದಸ್ಯರು
ಮನಗುಂದ